ಬದುಕನ್ನು ಸೀಳಿ ಏಕ ಬದುಕನ್ನು ಕಟ್ಟಲು ಹೊರಟಿರುವ ಇಂದಿನ ಸಂದರ್ಭದಲ್ಲಿ ಧರ್ಮ ಸಂರಚನೆಯ ಚೌಕಟ್ಟು, ಪ್ರಜಾಸತ್ತೆಯ ಬಿಕ್ಕಟ್ಟು, ಮುಂತಾದ ವಿಚಾರಗಳು ಹೊಸಬರಲ್ಲಿ ಕಂಡರೂ ಇವುಗಳನ್ನು ಕವಿತೆಯಲ್ಲಿ ನಿರ್ವಹಿಸಲು ಮಾಗಬೇಕಿದೆ ಎನ್ನುತ್ತಾರೆ. ನೆಲದ ಹಿಂಸಾರೂಪಗಳನ್ನು ತಣ್ಣಗೆ ವಿರೋಧಿಸುತ್ತಲೇ ಅಖಂಡವಾಗಿ ವ್ಯಾಪಿಸಿಕೊಳ್ಳುವ ಜವಾಬ್ದಾರಿ ಕವಿಗಳ ಮುಂದಿದೆ ಎನ್ನುವ ಇವರು ಈಗಿರುವ ಬದುಕಿನ ಪಲ್ಲಟದಲ್ಲಿ ಸೌಂದರ್ಯಾತ್ಮಕ ನೆಲೆ ಸಾಧ್ಯವಿಲ್ಲ ಎಂಬ ಅಭಿಪ್ರಾಯಕ್ಕೆ ಬರುತ್ತಾರೆ.

ದಲಿತತ್ವ ಮತ್ತು ದಲಿತ ಕಾವ್ಯ ಮೀಮಾಂಸೆ ಬಗ್ಗೆ ಚರ್ಚಿಸುತ್ತ ಬುದ್ಧೋತ್ತರ ಮತ್ತು ಅಂಬೇಡ್ಕರೋತ್ತರ ಎಂದು ವಿಭಾಗಿಸಿ ದಲಿತ ಮೀಮಾಂಸೆಯನ್ನು ಅರಿಯಬಹುದಾದ ಮಾರ್ಗದ ಬಗ್ಗೆ ಆಲೋಚಿಸುತ್ತಾರೆ. ಸಾರ್ವಜನಿಕ ನೆಲೆಯಲ್ಲಿ ಇಬ್ಬರ ಕುರಿತು ಹಲವು ರೀತಿಯಲ್ಲಿ ಚರ್ಚಿಸಬಹುದಾದರೂ ಕವಿತೆಯ ರೂಪದಲ್ಲಿ ಅವರನ್ನು ಗರ್ಭೀಕರಿಸುವುದು ಸವಾಲಿನ ಕೆಲಸ ಎನ್ನುತ್ತಾರೆ. ವೈಚಾರಿಕ ಆಕೃತಿ ಮತ್ತು ಆಶಯಗಳನ್ನು ನಿರ್ಮಿಸಿಕೊಳ್ಳುವಾಗ ಅನೇಕ ಬಾರಿ ಆತ್ಮಮರುಕದಿಂದ ಹೊರಬರಲು ಹಲವರಿಗೆ ಸಾಧ್ಯವಾಗುತ್ತಿಲ್ಲ ಎಂಬುದನ್ನೂ ಗುರುತಿಸುತ್ತಾರೆ. ಆಧುನಿಕ ದಲಿತರು ಬುದ್ಧನನ್ನು ಒಂದು ಸಂಕೇತವಾಗಿ ಮಾಡಿಕೊಂಡರೂ ಭಕ್ತಿಪಂಥದ ದಲಿತ ಮತ್ತು ಬಹುಜನ ಮೂಲದ ಕವಿ ಹಾಗು ಸಂತರು ಎಷ್ಟರ ಮಟ್ಟಿಗೆ ಒಳಗು ಮಾಡಿಕೊಂಡರು ಎಂಬುದನ್ನು ಅವಲೋಕಿಸುವ ಅಗತ್ಯದ ಬಗ್ಗೆ ನಾಗಲಮಡಿಕೆ ಗಮನ ಸೆಳೆಯುತ್ತಾರೆ. ಬೌದ್ಧ ಮೀಮಾಂಸೆಯ ಮೂಲಕ ಕನ್ನಡ ಕಾವ್ಯದ ಬಗ್ಗೆ ಚರ್ಚೆ ನಡೆಯುತ್ತಿರುವುದನ್ನು ಪ್ರಸ್ತಾಪಿಸುವ ಲೇಖಕರು ಅಲ್ಲಿ ಆಗುತ್ತಿರುವುದು ತತ್ವ ಮೀಮಾಂಸೆಯೋ, ಕಾವ್ಯ ಮೀಮಾಂಸೆಯೋ ಎಂದು ಸಕಾರಣ ಸಂದೇಹ ತಾಳುತ್ತಾರೆ. ಶೂದ್ರ ಸಮುದಾಯಗಳಲ್ಲಿ ಮಂಟೇಸ್ವಾಮಿ, ಮಾದಪ್ಪರಷ್ಟು ಬೇರೆ ಕುಲ ನಾಯಕರು ಚರ್ಚೆಗೆ ಬರುತ್ತಿಲ್ಲ ಎನ್ನುವ ಅವರು ಅನ್ಯಕುಲ ನಾಯಕರ ಜೊತೆ ಪರಿಶೀಲನೆ ಮಾಡುವ ಅಗತ್ಯ ಹಾಗೂ ಅದರಿಂದ ಹೊರಬರಬಹುದಾದ ಸಾಂಸ್ಕೃತಿಕ ಸತ್ಯಗಳತ್ತ ಗಮನ ಸೆಳೆಯುತ್ತಾರೆ. ಯಾವುದೇ ವ್ಯಕ್ತಿತ್ವಗಳನ್ನು ಸಮಕಾಲೀನಗೊಳಿಸುವುದೆಂದರೆ ಭಾವುಕ ಮೆರವಣಿಗೆ ಮಾಡುವುದಲ್ಲ. ಬದಲಿಗೆ 'ಕುಸುಮಬಾಲೆ'ಯಂಥ ಕಲಾಕೃತಿಯನ್ನು ನಿರ್ಮಿಸುವುದು ಎಂಬುದು ಅವರ ಖಚಿತ ಅಭಿಪ್ರಾಯ. ಮಹಿಳಾ ಕಾವ್ಯದಲ್ಲಿ 'ಅವನ' ಮೇಲಿನ ಸಿಟ್ಟು ಕಡಿಮೆಯಾಗಿದೆ ಎನ್ನುವ ನಾಗಲಮಡಿಕೆ ಅವನು ಮತ್ತು ಅವಳ ಸಮನ್ವಯವಾಗುತ್ತಿರುವುದು ಸೋಲಿನ ಭೀತಿಯಿಂದಲ್ಲ, ಬದಲಿಗೆ ಬದಲಾದ ಬದುಕಿನ ಶೈಲಿಯಿಂದ ಎಂದು ತೀರ್ಮಾನಿಸುತ್ತಾರೆ.

> **ಬಹುತ್ವ ಮತ್ತು ನವರಾಷ್ಟ್ರೀಯತೆಯ ಬಿಕ್ಕಟ್ಟಿನ ನಡುವೆ ಮುಗ್ಧಲೋಕವೊಂದು ಮಾಯವಾಗುವ ಸ್ಥಿತಿಯಿದ್ದು ಹೊಸಬರ ಕವಿತೆ ಇದನ್ನು ತಾಕಬೇಕು ಎಂಬ ಲೇಖಕರ ನಿಲುವು ದಿಟ್ಟವಾಗಿದೆ. ಹಾಗಿದ್ದಲ್ಲಿ ಈ ಮುಗ್ಧಲೋಕವು ಮಧ್ಯಮ ಮಾರ್ಗವಿರಬಹುದೇ ಎಂಬುದರ ಕುರಿತು ಚರ್ಚೆಯ ಅಗತ್ಯವಿದೆ.**

ಈ ಕಾಲಮಾನದ ಕವಿಗಳಿಗೆ ಜಾತಿ ಮತ್ತು ಧರ್ಮಗಳ ಧ್ರುವೀಕರಣವು ಭೂತ ಹಾಗೂ ರೋಗದಂತೆ ಕಾಡುತ್ತಿದೆ ಎನ್ನುವ ಸುರೇಶ್ ನಾಗಲಮಡಿಕೆ ಕೆಲವರಲ್ಲಿ ಸಾಮಾಜಿಕ ಬದ್ಧತೆಯು ವೈಯಕ್ತಿಕ ಹಿತಾಸಕ್ತಿಗಳಿಗೆ ತಿರುಗಿ, ಆತ್ಮರತಿಯಿಂದ ಹಾದು, ಸೋಗಲಾಡಿತನಕ್ಕೆ ತಲುಪುತ್ತಿದೆ